**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ಎಸ್.ಹರಿಕೃಷ್ಣ ಶಿವತ್ತಾಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಂಬಲಪಾಡಿ ಗ್ರಾಮ ಪಂಚಾಯತಿ, ಕಿದಿಯೂರು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

1) ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/992/2015/ಪಿಪಿ, ದಿನಾಂಕ: 28.03.2017.

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 18/20-02-2017 ರ ವರದಿಯಲ್ಲಿ ಶ್ರೀ ಎಸ್.ಹರಿಕೃಷ್ಣ ಶಿವತ್ತಾಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಂಬಲಪಾಡಿ ಗ್ರಾಮ ಪಂಚಾಯತಿ, ಕಿದಿಯೂರು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಶ್ರೀ ಚಂದ್ರಕಾಂತ ಶೆಟ್ಟಿ ಇವರು ಉಡುಪಿ ತಾಲ್ಲೂಕಿನ ಅಂಬಲಪಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶ್ರೀ ಸ್ಲೀವಾರೆಡ್ಡಿ ಮತ್ತು ಶ್ರೀ ಗಾದೆ ಜ್ಞಾನರೆಡ್ಡಿ ಇವರಿಬ್ಬರು ಡೆವಲಪರ್ಸ್‌ಗಳಾಗಿದ್ದು, ಇವರುಗಳು ಕಿದಿಯೂರು-ಅಂಬಲಪಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರ್ವೆ ನಂ 39/9 ಮತ್ತು 39/11 ರಲ್ಲಿ ಇದ್ದ ಕಾರ್ ಪಾರ್ಕಿಂಗ್ ಜಾಗದಲ್ಲಿ 4 ಅಂತಸ್ತಿನ ಕಟ್ಟಡವನ್ನು ಕಟ್ಟಿದ್ದು, ಇದು ಕಾನೂನು ಬಾಹಿರವಾಗಿರುತ್ತದೆ. ಇದಕ್ಕೆ ಅಂಬಲಪಾಡಿ ಅಭಿವೃದ್ಧಿ ಅಧಿಕಾರಿಯವರು ಶಾಮೀಲಾಗಿರುತ್ತಾರೆ, ಕಟ್ಟಡ ನಿರ್ಮಾಣ ಮಾಡಲು ಸದರಿ ಡೆವಲಪರ್ಸ್‌ಗಳು ಎಲ್ಲ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ, ಪರವಾನಿಗೆ ಷರತ್ತುಗಳನ್ನು ಉಲ್ಲಂಘಿಸಿರುತ್ತಾರೆ. ಈ ಬಗ್ಗೆ ಎದುರುದಾರರ ಗಮನಕ್ಕೆ ತಂದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಮತ್ತು ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಕಿದಿಯೂರು – ಅಂಬಲಪಾಡಿ ಗ್ರಾಮದ ಸರ್ವೆ ನಂ. 39/9 ಮತ್ತು 39/11 ರಲ್ಲಿ ಶ್ರೀ ಸ್ಲೀವಾರೆಡ್ಡಿ ಮತ್ತು ಶ್ರೀ ಗಾದೆ ಜ್ಞಾನಾ ರೆಡ್ಡಿ ಇವರುಗಳು ಡೆವಲಪರ್ಸ್‌ಗಳಾಗಿ 4 ಅಂತಸ್ತಿನ ವಸತಿ ಸಮುಚ್ಛಯವನ್ನು ಕಟ್ಟಿರುವುದು ಸ್ಪಷ್ಟ ಪಟ್ಟಿದೆ. ಇದಕ್ಕೆ ಸದರಿ ಡೆವಲಪರ್‌ಗಳು ಗ್ರಾಮ ಪಂಚಾಯತಿ ವತಿಯಿಂದ ಕಟ್ಟಡ ಕಟ್ಟಲು ಪರವಾನಗಿಯನ್ನು ಪಡೆದಿರುವುದು ಹಾಗೂ ಉಡುಪಿ ನಗರ ಪ್ರಾಧಿಕಾರಿದಿಂದ ಪೂರ್ವಾನುಮತಿಯನ್ನು ಪಡೆದಿರುವುದು ಕಂಡು ಬರುತ್ತದೆ. ಉಡುಪಿ ನಗರ ಪ್ರಾಧಿಕಾರಿದಿಂದ ಇವರು ನೀಡಿರುವ ಅನುಮತಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಅಂಬಲಪಾಡಿ ಗ್ರಾಮ ಪಂಚಾಯತಿಯಿಂದ ನೀಡಿರುವ ಪರವಾನಗಿ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಪರವಾನಗಿಯ ಪ್ರತಿಯನ್ನು ಪರಿಶೀಲಿಸಿದಲ್ಲಿ ಅಂಬಲಪಾಡಿ ಗ್ರಾಮದ ಸರ್ವೆ ನಂ.39/9, 39/9ಪಿ2 ಹಾಗೂ 39/11 ರಲ್ಲಿನ ಒಟ್ಟು 45 ಸೆಂಟ್ಸ್ ಜಾಗದಲ್ಲಿ ನೆಲ + 3 ಅಂತಸ್ತಿನ ವಸತಿ ಸಮುಚ್ಛಯ ಕಟ್ಟಲು ಪರವಾನಗಿ ನೀಡಿರುವುದು ಕಂಡು ಬರುತ್ತದೆ. ಆದರೆ, ಈ ದಾಖಲೆಗಳಲ್ಲಿ ಸದರಿ ಸ್ಥಳವನ್ನು ಕಾರ್ ಪಾರ್ಕಿಂಗ್ ಜಾಗಕ್ಕಾಗಿ ಮೀಸಲಿಟ್ಟಿದ್ದ ಬಗ್ಗೆ ಕಂಡು ಬರುವುದಿಲ್ಲ. ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಒಂದು ಪತ್ರವನ್ನು ಬರೆದಿದ್ದು, ಅದು ದಿ:01/10/2014ರ ಪತ್ರವಾಗಿರುವುದು ಕಂಡು ಬರುತ್ತದೆ. ಸದರಿ ಪತ್ರದಲ್ಲಿ ದೂರುದಾರರು ಅಂಬಲಪಾಡಿ ಗ್ರಾಮದ ಸರ್ವೆ ನಂ. 39/5ಎ ನತ್ತಯ 39/5ಬಿ ಯಲ್ಲಿನ 31 ಸೆಂಟ್ಸ್ ಜಾಗಕ್ಕೆ ಮಾಲೀಕರಾಗಿದ್ದು, ಮಾನಸ ಬಿಲ್ಡರ್ಸ್ ನವರು ಸದರಿ ಜಾಗದ ಬಗ್ಗೆ ತಕರಾರು ಮಾಡುತ್ತಿರುವುದಾಗಿಯೂ, ಇದರಿಂದ ತನ್ನ ಹಾಗೂ ಮಾನಸ ಬಿಲ್ಡರ್ಸ್‌ಗಳ ನಡುವೆ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬಾಕಿ ಇರುತ್ತದೆ. ಇದಲ್ಲದೇ, ನ್ಯಾಯಾಲಯದ ತಡೆಯಾಜ್ಞೆ ಸಹ ಇರುತ್ತದೆ. ಆದರೆ, ಪ್ರಕರಣವು ವಿಲೇಗೆ ಬಾಕಿ ಇರುವಾಗಲೆ ಮಾನಸ ಬಿಲ್ಡರ್ಸ್‌ನ ಮಾಲೀಕರಾದ ಶ್ರೀ ಜ್ಞಾನಾ ರಡ್ಡಿಯವರು ಇತರರೊಂದಿಗೆ ಸೇರಿಕೊಂಡು ಸದರಿ ಜಾಗದಲ್ಲಿ ಕಾಂಪೌಂಡ್ ಗೋಡೆಯನ್ನು ಕಟ್ಟುತ್ತಿದ್ದಾರೆ. ಈ ಬಗ್ಗೆ ತಾನು ಪ್ರಶ್ನಿಸಿದಲ್ಲಿ, ಸದರಿಯವರು ತನ್ನನ್ನು ಉಪೇಕ್ಷಿಸಿರುತ್ತಾರೆ. ಆದ್ದರಿಂದ ಸದರಿ ಕಾಂಪೌಂಡ್ ಗೋಡೆಯನ್ನು

ತಡೆಯಿಡಿಯಬೇಕೆಂದು ಕೋರಿರುವುದು ಕಂಡು ಬರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಅಂಬಲಪಾಡಿ ಗ್ರಾಮ ಪಂಚಾಯತಿ ವತಿಯಿಂದ ಶ್ರೀ ಚಂದ್ರಕಾಂತ್ ಶೆಟ್ಟಿಯವರು ತಮ್ಮ ಜಾಗದಲ್ಲಿ ಶ್ರೀ ಸ್ಲೀವಾರೆಡ್ಡಿಯವರು ಅತಿಕ್ರಮಣ ಮಾಡಿರುವ ಬಗ್ಗೆ ಸಲ್ಲಿಸಿರುವ ದೂರು ಅರ್ಜಿಯ ಮೇರೆಗೆ ಶ್ರೀ ಸ್ಲೀವಾರೆಡ್ಡಿಯವರಿಗೆ ನೋಟೀಸ್ ನೀಡಿ ತಕರಾರು ಸ್ಥಳದ ಅಳತೆಯನ್ನು ಮಾಡಿಸಿ ತಮ್ಮ ಜಾಗವನ್ನು ಖಾತರಿಪಡಿಸಿಕೊಳ್ಳುವವರೆಗೂ ತಮ್ಮ ವಸತಿ ಸಮುಚ್ಚಯದ ಕಾಮಗಾರಿಯನ್ನು ನಿಲ್ಲಿಸಬೇಕೆಂದು ಇಲ್ಲವಾದಲ್ಲಿ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿ ನೋಟೀಸ್ ನೀಡಿರುವುದು ಕಂಡು ಬರುತ್ತದೆ. ಸದರಿ ನೋಟೀಸ್‌ನ ಪ್ರತಿಯನ್ನು ಹಾಜರುಪಡಿಸಲಾಗಿದೆ ಎಂದು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ದೂರುದಾರರು ಹಾಗೂ ಡೆವಲಪರ್ಸ್ ನಡುವೆ ಜಾಗದ ಗಡಿ ತಕರಾರಿಗೆ ಸಂಬಂಧಿಸಿದಂತೆ ಸರ್ವೇಯರ್ ಮೂಲಕ ಅಳತೆ ಮಾಡಿಸಲಾಗಿ, ಸದರಿ ಕಟ್ಟಡದ ಮಾಲೀಕರಿಂದ ಯಾವುದೇ ಅತಿಕ್ರಮಣವಾಗಿಲ್ಲವೆಂದು ಹಾಗೂ ಅವರು ಬಿಡಬೇಕಾಗಿದ್ದ ಜಾಗ ಸರಿಯಿದೆ ಎಂದು ಮನವರಿಕೆ ಮಾಡಿಕೊಳ್ಳಲಾಗಿತ್ತೆಂದು ತಿಳಿಸಿರುತ್ತಾರೆ. ಆದರೆ, ಎದುರುದಾರರು ತಮ್ಮ ಆಕ್ಷೇಪಣೆಯೊಡನೆ ತಕರಾರಿನ ಜಾಗದ ಸರ್ವೇ ಮಾಡಿಸಿರುವ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಹಾಗೆಯೇ ಅಂಬಲಪಾಡಿ ಗ್ರಾಮ ಪಂಚಾಯತಿಯವರು ಮಾಹಿತಿ ಹಕ್ಕು ನಿಯಮದಡಿ ದೂರುದಾರರಿಗೆ ನೀಡಿರುವ ಮಾಹಿತಿಯಲ್ಲಿ ಸರ್ವೇಯರ್ ನಿಂದ ಅಳತೆ ಮಾಡಿದ ಬಗ್ಗೆ ದಾಖಲೆ ಇಲ್ಲವೆಂದು ತಿಳಿಸಿರುತ್ತಾರೆ. ಸದರಿ ಮಾಹಿತಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ಹಾಗೂ ಬಿಲ್ಡರ್ಸ್‌ಗಳಾದ ಶ್ರೀ ಸ್ಲೀವಾರೆಡ್ಡಿ ಮತ್ತು ಶ್ರೀ ಗಾದೆ ಜ್ಞಾನಾ ರೆಡ್ಡಿ ಇವರ ನಡುವೆ ಜಾಗದ ಅತಿಕ್ರಮಣದ ಬಗ್ಗೆ ತಕರಾರು ಇರುವುದು ಮತ್ತು ಈ ತಕರಾರಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಅಸಲು ದಾವೆ ವಿಲೇಗೆ ಬಾಕಿ ಇದೆ ಎಂಬುದು ದೂರುದಾರರ ದಿ: 01/10/2014ರ ಪತ್ರದಿಂದ ಕಂಡು ಬರುತ್ತದೆ. ಸದರಿ ದಾವೆಯಲ್ಲಿ ಡೆಲಪರ್‌ಗಳಾದ ಶ್ರೀ ಸ್ಲೀವಾರೆಡ್ಡಿ ಮತ್ತು ಶ್ರೀ ಗಾದೆ ಜ್ಞಾನಾ ರೆಡ್ಡಿರವರುಗಳು ದೂರುದಾರರ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂಬುದರ ಬಗ್ಗೆ ದಾವಾಂಶವಿದ್ದು, ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿರುವುದು ಸಹ ಕಂಡು ಬಂದಿರುತ್ತದೆ. ಇಂತಹ ಸಂದರ್ಭದಲ್ಲಿ ಮೇಲೆ ಹೇಳಿದ ಡೆವಲಪರ್‌ಗಳು ಕಾಂಪೌಂಡ್ ಗೋಡೆಯನ್ನು ಕಟ್ಟುತ್ತಿದ್ದುದ್ದು ಹಾಗೂ ಈ ವಿಷಯವನ್ನು ದೂರುದಾರರು ಗ್ರಾಮ ಪಂಚಾಯತಿಯ ಗಮನಕ್ಕೆ ತಂದಿರುವುದು ಸ್ಪಷ್ಟಪಟ್ಟಿರುತ್ತದೆ. ಪಂಚಾಯತಿಯವರು ಸದರಿ ಕಟ್ಟಡ ನಿರ್ಮಾಣವನ್ನು ತಡೆಯಿಡಿಯಲು ನೋಟೀಸ್ ನೀಡಿರುವುದು ಸ್ಪಷ್ಟ ಪಟ್ಟಿರುತ್ತದೆ. ಈ ಎಲ್ಲ ಅಂಶಗಳನ್ನು ಪರಿಶೀಲಸಿದಲ್ಲಿ ಎದುರುದಾರರು ಸ್ಥಳ ಪರಿಶೀಲನೆ ಮಾಡಿ ಅತಿಕ್ರಮಣದ ಬಗ್ಗೆ ಸರ್ವೆ ಮಾಡಿಸಲಾಗಿತ್ತು ಎಂದು ತಿಳಿಸಿರುವ ಬಗ್ಗೆ ಅನುಮಾನ ಉಂಟಾಗಿರುತ್ತದೆ. ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ದೂರುದಾರರ ಜಾಗವು ಅತಿಕ್ರಮಣವಾಗಿಲ್ಲವೆಂದು ತೀರ್ಮಾನಕ್ಕೆ ಬರಲು ಯಾವುದೇ ದಾಖಲಾತಿಯ ಆಧಾರಗಳು ಇರುವುದಿಲ್ಲ. ಇದಲ್ಲದೇ ಕಟ್ಟಡ ನಿರ್ಮಾಣ ಪರವಾನಗೆ ನೀಡಿದ ನಂತರ ಕಟ್ಟಡ ನಿರ್ಮಾಣ ಕಾಲದಲ್ಲಿ ಎದುರುದಾರರು ಸ್ಥಳ ಪರಿಶೀಲನೆ ನಡೆಸಿರುವುದು ಕಂಡು ಬರುವುದಿಲ್ಲ. ಹಾಗೂ ಕಟ್ಟಡ ನಿರ್ಮಾಣ ಕಾಲದಲ್ಲಿ ಪಂಚಾಯತಿ ವತಿಯಿಂದ ವಿಧಿಸಲಾದ ಷರತ್ತುಗಳನ್ನು ಉಲ್ಲಂಘನೆಯಾಗುತ್ತಿದೆಯೋ ಎಂಬ ಬಗೆಗೂ ಸಹ ಕಾಲಕಾಲಕ್ಕೆ ಪರಿಶೀಲಿಸಿರುವುದು ಕಂಡು ಬರುವುದಿಲ್ಲ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಶ್ರೀ ಎಸ್.ಹರಿಕೃಷ್ಣ ಶಿವತ್ತಾಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಂಬಲಪಾಡಿ ಗ್ರಾಮ ಪಂಚಾಯತಿ, ಕಿದಿಯೂರು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(ii) ಮತ್ತು (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ

ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11-ಎ ರಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/284/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:17-05-2017</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಸ್.ಹರಿಕೃಷ್ಣ ಶಿವತ್ತಾಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಂಬಲಪಾಡಿ ಗ್ರಾಮ ಪಂಚಾಯತಿ, ಕಿದಿಯೂರು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 21 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ಎಸ್.ಹರಿಕೃಷ್ಣ ಶಿವತ್ತಾಯ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಅಂಬಲಪಾಡಿ ಗ್ರಾಮ ಪಂಚಾಯತಿ, ಕಿದಿಯೂರು, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ
7. ಗಣಕ ಕೋಶ
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.